## ಹೀಗಿರಲಿ ಆಕ್ಸೆಸರೀಸ್.

- ಮಳೆಗಾಲದಲ್ಲಿ ಒಂದೇ ರೀತಿಯ ವ್ಯಾನಿಟಿ ಬ್ಯಾಗ್ ಬಳಸುವ ಬದಲಿಗೆ ಬಣ್ಣಬಣ್ಣದ ಹ್ಯಾಂಡ್ ಬ್ಯಾಗ್ ಬಳಸಿದರೆ ಚೆನ್ನಾಗಿರುತ್ತದೆ.
- ಮೇಕಪ್ ಸರಳವಾಗಿರಲಿ. ವಾಟರ್ ಪ್ರೂಫ್ ಲಿಪ್‌ಸ್ಟಿಕ್ ಹಚ್ಚಿ.
- ಪೌಡರ್ ಬಳಸುವ ಮೊದಲು ತೆಳುವಾಗಿ ಫೌಂಡೇಷನ್ ಹಚ್ಚಿಕೊಂಡರೆ ಹೆಚ್ಚು ಸಮಯ ಉಳಿಯುತ್ತದೆ.
- ಗುಣಮಟ್ಟದ ಸ್ವೆಟರ್, ಕೋಟ್, ಸ್ಕಾರ್ಫ್ ಬಳಸಿ ಬೆಚ್ಚಗಿರಿ.
- ಉತ್ತಮ ಗುಣಮಟ್ಟದ ರೈನ್‌ಕೋಟ್ ಧರಿಸಿ.
- ಮಳೆಗಾಲದಲ್ಲಿ ತಲೆಗೂದಲ ಆರೈಕೆ ಬಹಳ ಮುಖ್ಯ. ಕೂದಲನ್ನು ಗಾಳಿಗೆ ಹಾರಿಬಿಡುವ ಬದಲಿಗೆ ಸ್ಟೈಲಾಗಿ ಕ್ಲಿಪ್ ಹಾಕಿ ಅಥವಾ ಜಡೆಯನ್ನು ವೈವಿಧ್ಯಮಯವಾಗಿ ಹೆಣೆದುಕೊಳ್ಳಿ.



ಆಸ್ವಾದಿಸಬಹುದು.

ಎಷ್ಟೇ ಚಂದದ ಸೀರೆ ಇದ್ದರೂ, ಉದ್ದದ ಲೆಹೆಂಗಾ, ಸಲ್ವಾರ್ ಇದ್ದರೂ ಇವೆಲ್ಲ ಮಳೆಗಾಲಕ್ಕೆ ಅಷ್ಟೊಂದು ಸೂಕ್ತ ಎನಿಸುವುದಿಲ್ಲ. ನಮ್ಮ ಅಗತ್ಯಕ್ಕೆ ತಕ್ಕಂತೆ ಉಡುಪಿನ ಆಯ್ಕೆಯನ್ನೂ ಬದಲಾಯಿಸಿಕೊಂಡರೆ ಈ ಕಾಲದಲ್ಲಿ ಫ್ಯಾಷನಬಲ್ ಆಗಿ ಇರಬಹುದು. ಹೀಗಾಗಿ ಮಳೆಗಾಲಕ್ಕಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಲಾದ ಶಾರ್ಟ್ ಡ್ರೆಸ್, ಕುರ್ತಿ, ಟಾಪ್‌ಗಳನ್ನು ಧರಿಸಿಕೊಂಡು ಶಾಲೆ, ಕಾಲೇಜು, ಕಚೇರಿ, ಶಾಪಿಂಗ್‌ಗಳಿಗೆ ಹೋಗಬಹುದು. ಸಾಕಷ್ಟು ಟ್ರೆಂಡ್ ಆಗಿರುವಂಥ ಗಾಢ ವರ್ಣದ ಉಡುಪುಗಳು ವರ್ಷ ರುತುವಿಗಾಗಿಯೇ ಬಂದಿವೆ. ಶಾರ್ಟ್ ಟಾಪ್‌ಗೆ ಸೂಕ್ತವೆನಿಸುವ ಲೆಗಿಂಗ್ಸ್ ಹಾಕಿಕೊಂಡರೂ ಚೆನ್ನಾಗಿ ಕಾಣುತ್ತದೆ. ಇದೇ ರೀತಿ ಕುರ್ತಿ, ಸಲ್ವಾರ್, ಚೂಡಿದಾರ್ ಹಾಕಿಕೊಳ್ಳುವಾಗಲೂ ಗಾಢ ವರ್ಣವನ್ನೇ ಆಯ್ದುಕೊಳ್ಳುವುದು ಒಳ್ಳೆಯದು. ಕಪ್ಪು, ಕಂದು, ಪಿಂಕ್, ಕೆಂಪು, ಹಸುರು, ಹಳದಿ ಬಣ್ಣಗಳ ಉಡುಗೆಗಳನ್ನೂ ಇಷ್ಟಪಟ್ಟು ತೊಡಬಹುದು.

'ಮಳೆಗಾಲ, ಚಳಿಗಾಲ, ಬೇಸಿಗೆ ಕಾಲ.. ಹೀಗೆ ಎಲ್ಲ ಕಾಲಗಳಿಗೂ ಕಾಟನ್ ಬಟ್ಟೆಯೇ ಹೆಚ್ಚು ಸೂಕ್ತ ಎನ್ನುವುದು ಫ್ಯಾಷನ್ ತಜ್ಞರ ಅಭಿಮತ. ಕಾಟನ್‌ನಲ್ಲೂ ಈಗ ಸಿಲ್ಕ್ ಕಾಟನ್, ತೆಳುವಾದ ಕಾಟನ್, ಖಾದಿ ಕಾಟನ್ ಫ್ಯಾಬ್ರಿಕ್‌ನಿಂದ ತಯಾರಿಸಿದ ಉಡುಗೆಗಳು ಬಂದಿದ್ದು ಮಳೆಗಾಲದಲ್ಲಿ ಧರಿಸಲು ಆರಾಮದಾಯಕವಾಗಿಯೂ ಇರುತ್ತದೆ. ಜೊತೆಗೆ ನೈಲಾನ್, ಶಿಫಾನ್, ಸಿಂಥೆಟಿಕ್, ಮಲ್‌ಬಟ್ಟೆಯ ಉಡುಗೆಗಳೂ ಬೇಗನೆ ಒಣಗಲು, ಇಸ್ತ್ರಿ ಹಾಕಿಕೊಳ್ಳಲು ಅನುಕೂಲಕರವಾಗಿರುತ್ತವೆ' ಎಂದು ಹೇಳುತ್ತಾರೆ ಬೆಂಗಳೂರಿನ ಫ್ಯಾಷನ್ ತಜ್ಞೆ ಅನಿತಾ ಪೈ.

'ಮಳೆಯ ಜೊತೆಗೆ ಚಳಿಯ ಅಬ್ಬರವೂ ಜೋರು, ಹೀಗಾಗಿ ಜಾಕೆಟ್, ಸ್ಕಾರ್ಫ್, ಟ್ರಾನ್ಸ್‌ಪರೆಂಟ್ ಕ್ಯಾಪ್, ರೈನ್‌ಕೋಟ್ ಬಳಸಬಹುದು. ಇವೆಲ್ಲವೂ ಈಗಿನ ಫ್ಯಾಷನ್‌ನಿಂದ ಕೂಡಿದರೆ ಸಖತ್ ಲುಕ್ ಪಡೆಯಬಹುದು. ಅಲ್ಲದೆ ಮಳೆಗಾಲಕ್ಕಾಗಿಯೇ ಈಗ ಟ್ರೆಂಚ್ ಕೋಟ್‌ಗಳೂ ಲಭ್ಯ. ಪಾರದರ್ಶಕವಾಗಿರುವ ಈ ಟ್ರೆಂಚ್ ಕೋಟ್‌ಗಳನ್ನು ಉಡುಪಿನ ಮೇಲೆ ಹಾಕಿಕೊಳ್ಳಬಹುದು. ವಿವಿಧ ವಿನ್ಯಾಸಗಳಲ್ಲಿ ಲಭ್ಯವಿರುವ ಇಂಥ ಕೋಟ್‌ಗಳು ಮಲ್ಟಿಪರ್ಪಸ್ ಆಗಿಯೂ ಬಳಸಿಕೊಳ್ಳಬಹುದು' ಎಂದು ಸಲಹೆ ನೀಡುತ್ತಾರೆ ಅವರು.

### ಫ್ಯಾಷನಬಲ್ ಸ್ವೆಟರ್

ಮಳೆ ಜೊತೆ ಬೀಸುವ ಗಾಳಿಗೆ ಚಳಿ ಒತ್ತರಿಸಿಕೊಂಡು ಬರುತ್ತದೆ, ಇದು ಸಹಿಸಲಸಾಧ್ಯವಾದಾಗ ಸ್ವೆಟರ್‌ನ ಅವಶ್ಯಕತೆ ಇರುತ್ತದೆ, ಮೈ ಕೊರೆಯುವ ಚಳಿಯಿಂದ ರಕ್ಷಣೆ ಪಡೆಯುವುದರ ಜೊತೆಗೆ ಫ್ಯಾಷನ್ ಮೆರೆಯಬೇಕಾದರೆ ಥರಾವರಿ ವಿನ್ಯಾಸದ, ವಿವಿಧ ಬಣ್ಣಗಳ ಸ್ವೆಟರ್ ಖರೀದಿಸಬೇಕಾಗುತ್ತದೆ. ಫ್ಯಾಷನ್‌ಪ್ರಿಯರಿಗಾಗಿಯೇ ಈಗ ಸೀಕ್ವೆನ್ಸ್ ಮಾದರಿಯ ವಿನ್ಯಾಸವಿರುವ ಸ್ವೆಟರ್, ಕಸೂತಿ ಇರುವ, ಲೇಸ್ ಇರುವಂಥ, ಮಣಿಗಳಿಂದ ಅಲಂಕೃತವಾದ ಸ್ವೆಟರ್‌ಗಳು ಲಭ್ಯ. ಇವನ್ನು ಉಡುಪಿನ ಮೇಲೆ ಧರಿಸುವಾಗ ಮಿಕ್ಸ್ ಅಂಡ್ ಮ್ಯಾಚ್ ಮಾಡಿಯೂ ಬಳಸಬಹುದು.

### ರೈನ್ ಜಾಕೆಟ್, ರೈನ್ ಕೋಟ್

ಮಳೆಗಾಲದಲ್ಲಿ ಟ್ರೆಕ್ಕಿಂಗ್ ಹೊರಡೋದು, ಹೊರಗಡೆ ಸುತ್ತಾಡುವುದು ಅನೇಕರ ಪ್ರಿಯ ಹವ್ಯಾಸ. ಆದರೆ ಜಡಿ ಮಳೆಯಲ್ಲಿ ಕೊಡೆ ಹಿಡಿದು ಹೋಗಲು ಕಷ್ಟ, ಕಿರಿಕಿರಿ ಕೂಡ. ಇಂಥವರಿಗೆ ರೈನ್‌ಕೋಟ್ ಮತ್ತು ರೈನ್ ಜಾಕೆಟ್ ಉತ್ತಮ ಆಯ್ಕೆ. ಫ್ಯಾಷನಬಲ್ ಆಗಿರುವ ರೈನ್ ಜಾಕೆಟ್ ಕೊಳ್ಳುವಾಗ ಬಣ್ಣ, ಆಕಾರ, ವಿನ್ಯಾಸಗಳ ಬಗ್ಗೆಯೂ ಗಮನವಿರಲಿ. ಇದು ಸ್ಟೈಲಿಷ್ ಲುಕ್ ಪಡೆಯಲು ಸಹಕಾರಿ.

ಮಕ್ಕಳಿಗಾದರೆ ರೈನ್‌ಕೋಟ್‌ನಲ್ಲಿ ತುಂಬ ಆಯ್ಕೆಗಳಿವೆ. ಮಕ್ಕಳು ಕಾರ್ಟೂನ್ ಕ್ಯಾರೆಕ್ಟರ್ ಚಿತ್ರ, ಕಾಮಿಕ್ಸ್ ಪ್ರಿಂಟ್ಸ್, ಪ್ರಾಣಿ ಪಕ್ಷಿಗಳ ಚಿತ್ರ ಇರುವ ರೈನ್‌ಕೋಟ್ ಇಷ್ಟಪಡುತ್ತಾರೆ. ಹಿಂದೆಲ್ಲ ರೈನ್‌ಕೋಟ್ ಎಂದರೆ ಇಡೀ ಮೈಮುಚ್ಚುವಂತಹ ಪ್ಲಾಸ್ಟಿಕ್‌ನಿಂದ ಮಾಡಿದ, ಅಷ್ಟೇ ಅಲ್ಲದೆ ಮಳೆಯಿಂದ ಸಂಪೂರ್ಣ ರಕ್ಷಣೆ ಪಡೆಯುವ ರೈನ್‌ಕೋಟ್‌ಗಳು ಮಾತ್ರ ಲಭ್ಯವಿದ್ದವು. ಕ್ಯಾಪ್ ಇರುವಂಥ ರೈನ್‌ಕೋಟ್ ಕೂಡ ಸಿಗುತ್ತಿತ್ತು. ಈಗ ಕಾಲಕ್ಕೆ ತಕ್ಕಂತೆ, ಮಳೆಯಲಿ ಜೊತೆಯಲಿ.. ಫ್ಯಾಷನ್ ರೈನ್‌ಕೋಟ್‌ಗಳು ಮನತಣಿಸುತ್ತಿವೆ.

### ಟ್ರೌಸರ್ಸ್

ಜೋರು ಮಳೆ ಸುರಿಯುವಾಗ ಕೊಡೆ ಹಿಡಿದುಕೊಂಡು ಹೋದರೂ ಒದ್ದೆಯಾಗುವುದಂತೂ ಗ್ಯಾರಂಟಿ. ಹೀಗಾಗಿ ಮಳೆಗಾಲದಲ್ಲಿ ಉದ್ದದ ಪ್ಯಾಂಟ್ ಧರಿಸುವ ಬದಲು ಆ್ಯಂಕಲ್ ಲೆಂತ್ ಪ್ಯಾಂಟ್ ಧರಿಸುವುದು ಸೂಕ್ತ. ಇದರ ಮೇಲೆ ಸಿಂಪಲ್ ಶರ್ಟ್ ಅಥವಾ ಕುರ್ತಿ ಧರಿಸಿದರೆ ಇನ್ನಷ್ಟು ಸುಂದರವಾಗಿ ಕಾಣಬಹುದು. ಚಳಿ ಇದ್ದರೆ ಇದರ ಮೇಲೊಂದು ಕೋಟ್ ಹಾಕಿಕೊಳ್ಳಬಹುದು.